ಹರಪ್ಪನಹಳ್ಳಿ ಟೌನಿನಲ್ಲಿ ಸರ್ಕಾರಿ ಬಾಲಕೀಯರ ಶಾಲಾ ಕಟ್ಟಡದ ನಿರ್ಮಾಣದ ಬಗ್ಗೆ

೧೧೩. (ಜೆಳಲ) ಶ್ರೀ ಬಿ.ಹೆಚ್. ಯಂಕಾನಾಯಕ (ಹರಪ್ಪನಹಳ್ಳಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹರಪ್ಪನಹಳ್ಳಿ ಟೌನಿನಲ್ಲಿ ಸರ್ಕಾರಿ ಬಾಲಕಿಯರ ಪ್ರೌಢಶಾಲೆಗೆ ಕಟ್ಟಡ ನಿರ್ಮಾಣ ಮಾಡುವುದಾಗಿ ಮಾನ್ಯ ಮಂತ್ರಿಗಳು ಭರವಸೆ ನೀಡಿದ್ದುದು ನಿಜವೆ?

ಆ) ಹಾಗಿದ್ದಲ್ಲಿ ಈವರೆಗೂ ಅದನ್ನು ಕಾರ್ಯರೂಪಕ್ಕೆ ತರದಿರಲು ಕಾರಣವೇನು?

ಇ) ಈಗಲಾದರೂ ಈ ವರ್ಷದ ಆಯವ್ಯಯದಲ್ಲಿ ಸದರಿ ಶಾಲಾ ಕಟ್ಟಡದ ನಿರ್ಮಾಣಕ್ಕೆ ಹಣವನ್ನು ಮಂಜೂರು ಮಾಡಿಕೊಡಲಾಗುವುದೇ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ಆರ್ಥಿಕ ಜಡಚಣೆಯಿಂದ

ಇ) ೧೯೮೪-೮೫ರ ಅಂದಾಜು ಪತ್ರದಲ್ಲಿ ಸೇರಿಸಲಾಗುವುದು.

ಶ್ರೀ ಬಿ. ಹೆಚ್. ಯಂಕಾನಾಯಕ್.—ಹರಪ್ಪನಹಳ್ಳಿ ಟೌನಿನ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಗೆ ಕಟ್ಟಡ ನಿರ್ಮಾಣ ಮಾಡಲಿಕ್ಕೆ, ಈ ವರ್ಷದ ಆಯವ್ಯಯದಲ್ಲಿ ಸದರಿ ಶಾಲಾ ಕಟ್ಟಡವನ್ನು ಕಟ್ಟಲಿಕ್ಕೆ ಹಣ ಮಂಜೂರು ಮಾಡಲಿಕ್ಕೆ, ೧೯೮೪-೮೫ರ ಅಂದಾಜು ಪತ್ರದಲ್ಲಿ ಸೇರಿಸಲಾಗುವುದೆಂದು ಹೇಳಿದ್ದೀರಿ, ಏತಕ್ಕೆ ಈಗ ಸೇರಿಸಲಿಕ್ಕೆ ಆಗಲಿಲ್ಲ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).—ಟೌನ್ ಪಂಚಾಯಿತಿಯವರು ಪಂತಿಕೆಯನ್ನು ಕೊಟ್ಟರೆ, ನಾನು ಕೂಡ ಹಣ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—೧೯೮೪ನೇ ಇಸವಿಯೊಳಗೆ ಶಾಲಾ ಕಟ್ಟಡವನ್ನು ಕಟ್ಟಿ ಮುಗಿಸುತ್ತೀರಾ?

ಶ್ರೀ ಬಿ. ರಾಚಯ್ಯ.—೧೯೮೪-೮೫ರೊಳಗೆ ಶಾಲಾ ಕಟ್ಟಡ ಕಟ್ಟಿ ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಶಾಲೆಗಳನ್ನು ನಡೆಸಲಿಕ್ಕೆ ಸ್ಥಳ ಇಲ್ಲದೇ ಇರುವ ಕಡೆಗಳಲ್ಲಿ, ಬಾಡಿಗೆ ಕೊಟ್ಟು ಶಾಲೆಗಳನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ಹಿಂದೆ ನೀವಂತೂ ಮಾಡಲಿಲ್ಲ, ನಾವಾದರೂ ಮಾಡುತ್ತೇವೆ.

ರಾಮದುರ್ಗ ತಾಲ್ಲೂಕಿನ ಬಿಜಗುಪ್ಪಿಗೆ ಕುಡಿಯುವ ನೀರಿನ ಸರಬರಾಜು

೧೧೪ (೪೭೫) ಶ್ರೀ ಎಫ್.ಎ. ಕೊಪ್ಪದ (ರಾಮದುರ್ಗ).—ಮಾನ್ಯ ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಮದುರ್ಗ ತಾಲ್ಲೂಕಿನ ಬಿಜಗುಪ್ಪಿಗೆ ಕುಡಿಯುವ ನೀರಿನ ಸರಬರಾಜಿನ ಬಗ್ಗೆ ಬಾವಿಯನ್ನು ತೋಡಿರುವುದು ನಿಜವೇ?

ಆ) ಸದರಿ ಬಾವಿಯು ಬಿಜಗುಪ್ಪಿಗೆ ಮೂರು ಕಿಲೋ ಮೀಟರ್ ದೂರವಿದ್ದು ಅದರ ಬಗ್ಗೆ ಅಂದಾಜನ್ನು ತಯಾರಿಸದಿರುವುದೂ ನಿಜವೇ?

ಇ) ಅಂದಾಜು ತಯಾರಿಸುವ ಬಗ್ಗೆ ಜಿಲ್ಲಾ ಅಭಿವೃದ್ಧಿ ಸಮಿತಿಯವರು ನಿರ್ಣಯವೊಂದನ್ನು ಮಾಡಿ ಸರ್ಕಾರದವರಿಗೆ ಕಳುಹಿಸಿರುವುದು ನಿಜವೆ?

ಈ) ಹಾಗಿದ್ದಲ್ಲಿ ಅಂದಾಜನ್ನು ತಯಾರಿಸಿ ನೀರು ಸರಬರಾಜನ್ನು ಎಂದಿನಿಂದ ಮಾಡಲಾಗುವುದು?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಎರಡು ಕೊಳವೆ ಬಾವಿಗಳನ್ನು ೧೯೭೬ರಲ್ಲಿ ತೋಡಲಾಗಿ ಅವು ವಿಫಲಗೊಂಡಿವೆ.

ಆ) ಇಲ್ಲ ಬಿಜಗುಪ್ಪಿಗೆ ಮೂರು ಕಿ.ಮೀ. ದೂರದ ಬಾವಿ ಬಗ್ಗೆ ಯಾವ ಅಂದಾಜು ಪಟ್ಟಿ ಸಿದ್ಧಪಡಿಸಿಲ್ಲ.

ಇ) ಹೌದು.

ಈ) ೧೯೮೫–೮೬ರ ಸಾಲಿನಲ್ಲಿ ಹೊಸ ಯೋಜನೆಗಳನ್ನು ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾಪವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಫ್. ಎ. ಕೊಪ್ಪದ.—ರಾಮದುರ್ಗ ತಾಲ್ಲೂಕು ಬಿಜಗುಪ್ಪಿ ಗ್ರಾಮಕ್ಕೆ ಕುಡಿಯುವ ನೀರನ್ನು ಒದಗಿಸಿಕೊಟ್ಟು, ನಮ್ಮ ಊರಿಗೆ ಕುಡಿಯುವ ನೀರಿನ ಕಲ್ಯಾಣಿಯನ್ನು ಮಾಡಿಕೊಟ್ಟರೆ ನಿಮ್ಮ ಹೆಸರನ್ನೆ ಇಡುತ್ತೇವೆ. ದಯವಮಾಡಿ ನಮಗೆ ಕುಡಿಯುವ ನೀರು ಒದಗಿಸಿಕೊಡಬೇಕು. ಕುಡಿಯುವ ನೀರಿಗೆ ಎಷ್ಟು ತೊಂದರೆಯಿದೆ ಎಂಬುದನ್ನು ನಮ್ಮ ಪಕ್ಷದ ನಾಯಕರಾದ ವೀರಪ್ಪಮೊಯಿಲಿಯವರಿಗೆ ತೋರಿಸಿದ್ದೇನೆ. ಅಲ್ಲಿ ತಾವುಕೂಡ ಬಂದು ನೋಡಬೇಕು. ಕುಡಿಯುವ ನೀರಿನ ಬಾವಿಯನ್ನು ನಮ್ಮ ಊರಿನ ೩ ಕಿಲೋಮಿಟರ್ ದೂರದಲ್ಲಿ ಮಾಡಿದ್ದಾರೆಂದು ಗೊತ್ತಾಗಿದೆ. ನಾವು ಇದುವರೆಗೆ ಕುಡಿಯುವ ನೀರಿಗಾಗಿ ಕೊಟ್ಟಂತಹ ಅರ್ಜಿಗಳನ್ನು ಅಧಿಕಾರಿಗಳು ತಮ್ಮ ಕಿಸೆಯೊಳಗೆ ಹಾಕಿಕೊಂಡಿದ್ದಾರೆ. ದಯವಮಾಡಿ ಮಾನ್ಯ ಮಂತ್ರಿಗಳು ನಮಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಬೇಕು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಸದಸ್ಯರು ಹೇಳುವಂತಹ ಊರಿನಲ್ಲಿ ಕೊಳವೆಬಾವಿ ತೋಡಿಸುವ ಬಗ್ಗೆ ಹೇಳುವುದಾದರೆ, ನನಗೆ ಬಂದಿರುವ ವರದಿಯ ಪ್ರಕಾರ ಆ ವಲಯ ಚೌಳುನೀರು ಬರತಕ್ಕ ಪ್ರದೇಶವಾಗಿದೆ. ಅಲ್ಲಿ ಕುಡಿಯುವ ನೀರಿಗೆ ತುಂಬಾ ಅಭಾವವಿದೆ ಮತ್ತು ತೊಂದರೆಯಿದೆ. ಮೂರು ಕಿಲೋಮಿಟರ್ ದೂರವಾದರೂ ಪರವಾಗಿಲ್ಲ, ಜಿಯಾಲಜಿಸ್ಟ್‌ರನ್ನು ಕಳುಹಿಸಿ ಕುಡಿಯಲಿಕ್ಕೆ ಯೋಗ್ಯವಾದ ನೀರು ಸಿಗುವುದಾದರೆ, ನಮ್ಮಲ್ಲಿ ಆಧುನಿಕ ಯಂತ್ರವಿದೆ, ಒಳ್ಳೆಯ ನೀರು ಸಿಗುವುದಾದರೆ ಈ ವರ್ಷವೇ ಅಂದಾಜು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಫ್. ಎ. ಕೊಪ್ಪದ.—೨ ಲಕ್ಷ ರೂಪಾಯಿ ಅಂದಾಜು ತಯಾರು ಮಾಡಿದ್ದಾರೆಂದು ಗೊತ್ತಾಗಿದೆ. ಆದು ನಮ್ಮ ಊರಿನಿಂದ ಮೂರು ಕಿಲೋಮಿಟರ್ ದೂರವಾಗುತ್ತದೆಂದು ತಿಳಿದು ಬಂದಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಸದಸ್ಯರು ಹೇಳತಕ್ಕ ವಿಷಯವನ್ನು ನಾನು ಪರಿಶೀಲನೆ ಮಾಡುತ್ತೇನೆ. ಈಗಾಗಲೇ ಎರಡು ಯೋಜನೆಗಳು ಸಿದ್ಧವಾಗಿವೆ. ಚೌಳುನೀರು ಬರತಕ್ಕ ವಲಯದಲ್ಲಿ ಆರೇಳು ಹಳ್ಳಿಗಳು ಇವೆ. ರಾಜ್ಯ ಸರ್ಕಾರದ ಬೊಕ್ಕಸದಿಂದ ಖರ್ಚು ಮಾಡಲಿಕ್ಕೆ ಸಾಧ್ಯವಾದಷ್ಟು ಖರ್ಚು ಬರುತ್ತದೆ. ಆದ್ದರಿಂದ ಅಂದಾಜು ತಯಾರುಮಾಡಿ ಕೇಂದ್ರ ಸರ್ಕಾರಕ್ಕೆ ಅಂದಾಜು ಪಟ್ಟಿಯನ್ನು ಯೋಜನಾ ರೂಪದಲ್ಲಿ ಕಳುಹಿಸಿಕೊಟ್ಟಿದ್ದೇವೆ. ಸಧ್ಯದಲ್ಲಿ ಮಾಡಲಿಕ್ಕೆ ಆಗದಿದ್ದರೂ, ಬಿಜಗುಪ್ಪಿ ಗ್ರಾಮಕ್ಕೆ ಮುಂದಿನವರ್ಷ ಕುಡಿಯುವ ನೀರನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶಿಕ್ಷಣ ಇಲಾಖೆಯಲ್ಲಿರುವ ಶಿಕ್ಷಕ-ಶಿಕ್ಷಕೇತರ ಹುದ್ದೆಗಳನ್ನು ಭರ್ತಿ ಮಾಡುವುದು

೧೧೫ (೩೫೭) ಶ್ರೀ ಕೆ. ವಸಂತಬಂಗೇರ (ಬೆಳ್ತಂಗಡಿ).—ಮಾನ್ಯ ವಿದ್ಯಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದ ಪ್ರಾಥಮಿಕ ಶಾಲೆಗಳಿಂದ ಹಿಡಿದು ಮಹಾ ವಿದ್ಯಾಲಯಗಳವರೆಗೆ ಶಿಕ್ಷಕರು ಹಾಗೂ ಶಿಕ್ಷಕೇತರ ನೌಕರರ ಹುದ್ದೆಗಳು ಖಾಲಿ ಇದ್ದು ಈ ಕೊರತೆಯು ಇಡೀ ಶಿಕ್ಷಣ ರಂಗವನ್ನೇ ದಿಕ್ಕೆಡಿಸಿದೆ. ಇಂತಹ ಗಂಭೀರ ಪರಿಸ್ಥಿತಿ ಇದ್ದರೂ ಶಿಕ್ಷಣ ಇಲಾಖೆ ಈ ಕಡೆಗೆ ಗಮನಹರಿಸಿ ಸಮಸ್ಯೆ ನಿವಾರಣೆಗೆ ಪ್ರಯತ್ನಿಸದಿರಲು ಕಾರಣವೇನು?